# ತಹಶೀಲ್ದಾರರು ಬಳ್ಳಾರಿ ರವರ ನ್ಯಾಯಾಲಯದ ನಡುವಳಿಗಳು

| ವಾದಿಗಳು: | ಪ್ರತಿವಾದಿಗಳು: |
|---|---|
| ಶ್ರೀ ಎಂ.ಗೋವರ್ಧನ್ ತಂದೆ ಎಂ.ವೆಂಕಟೇಶ್ | ಕಂದಾಯ ನಿರೀಕ್ಷಕರು ಮೋಕಾ |

ವಿಷಯ:-ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೆಣಕಲ್ಲು ಗ್ರಾಮದ ಸರ್ವೆ ನಂ:13/ಬಿ ವಿಸ್ತೀರ್ಣ:3.93 ಎಕರೆ ಜಮೀನಿಗೆ ಸಂಬಂಧಿಸಿದಂತೆ ವಿಚಾರಣೆ ಕುರಿತು.

********

ಪ್ರಸ್ತಾವನೆ:

ಮೇಲಿನ ವಿಷಯಕ್ಕೆ ಸಂಬಂಧಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೆಣಕಲ್ಲು ಗ್ರಾಮದ ಸರ್ವೆ ನಂ:13/ಬಿ ವಿಸ್ತೀರ್ಣ:3.93 ಎಕರೆ ಜಮೀನಿನ ಹಾಲಿ ಭೂಮಾಲಿಕರಾದ ಶ್ರೀ ನಾಗಪ್ಪ ತಂದೆ ಅಯ್ಯಾಳಪ್ಪ ಇವರು ಉಪನೊಂದಾಣೆ ಅಧಿಕಾರಿಗಳು ಬಳ್ಳಾರಿ ಇವರು ಸಂಖ್ಯೆ BLY-1-11016/2014-15 ದಿನಾಂಕ:24-12-2014ರಂತೆ ಶ್ರೀ ಎಂ ಗೋವರ್ಧನ್ ತಂದೆ ಎಂ ವೆಂಕಟೇಶ್ ಇವರಿಗೆ ಖರೀದಿಗೆ ಮಾರಟ ಮಾಡಿರುತ್ತಾರೆ. ದರಂತೆ ಖರೀದಿದಾರರು ಹಕ್ಕು ಬದಲಾವಣೆ ಮಾಡಲು ಮನವಿಯನ್ನು ಸಲ್ಲಿಸಿರುತ್ತಾರೆ. ಖರೀದಿದಾರರ ಮನವಿಯಂತೆ ಗ್ರಾಮದಲ್ಲಿ ನಮೂನೆ-21ನ್ನು ಜಾರಿಮಾಡಿರುತ್ತಾರೆ ನಿಗದಿತ ಅವದಿಯಲ್ಲಿ ಯಾವುದೇ ಆಕ್ಷೇಪಣೆಗಳು ಬಂದಿರುವುದಿಲ್ಲ ಆದರೆ ಸದ್ರಿ ಜಮೀನಿನ ಪಹಣಿ ಕಾಲಂ 11ರಲ್ಲಿ ಈ ಜಮೀನು ಹೆಚ್ ರಾಮಪ್ಪನಿಗೆ ವಿಕ್ರಯವಾಗಿದೆ ಕಟ್ಟೆ ಬಿಟ್ಟಿಲ್ಲ ಎಂದು ನಮೂದಿರುವುದರಿಂದ ಸದ್ರಿ ಹಕ್ಕು ಬದಲಾವಣೆ ಕಡತವನ್ನು ಪರಿಶೀಲಿಸಿ ಇತ್ಯರ್ಥ ಪಡಿಸಲು ಕಾರ್ಯಾಲಯಕ್ಕೆ ಸಲ್ಲಿಸಿರುತ್ತಾರೆ.

ಈ ಪ್ರಕರಣವನ್ನು ಇತ್ಯರ್ಥ ಪಡಿಸಲು:20-07-2015, 02-11-2015 ಮತ್ತು16-11-2015 ಮತ್ತು 28-04-2016ರಂದು ವಿಚಾರಣೆ ನಡೆಸಲಾಗಿ ಖರೀದಿದಾರರು ಪ್ರಕರಣಕ್ಕೆ ಹಾಜರಾಗಿರುತ್ತಾರೆ. ಸದ್ರಿ ಜಮೀನಿಗೆ ಸಂಬಂಧಿಸಿದಂತೆ ಗ್ರಾಮದಲ್ಲಿ ವಿಚಾರಣೆ ನಡೆಸಿ ವರದಿಸಲ್ಲಿಸಲು ಸೂಚಿಸಲಾಗಿರುತ್ತದೆ. ಹೆಚ್ ರಾಮಪ್ಪನಿಗೆ ವಿಕ್ರಯವಾಗಿದೆ ಎಂಬುದನ್ನು ತೆಗೆಯುವುದಕ್ಕೆ ಗ್ರಾಮದಲ್ಲಿ ವಿಚಾರಣೆ ನಡೆಸಲಾಗಿ ಯಾರು ಹೆಚ್ ರಾಮಪ್ಪ ಯಾರು ಎಂಬುವುದು ಕಂಡು ಬಂದಿರುವುದಿಲ್ಲ ಮತ್ತು 1961 ರಿಂದ 2015ರ ವರೆಗಡ ಇ.ಸಿ ಪರಿಶೀಲಿಸಲಾಗಿ ಯಾವುದೇ ರೀತಿಯ ಆಯ್ಕೆಯಾಗಿರುವುದಿಲ್ಲವೆಂದು ಕಂದಾಯ ನಿರೀಕ್ಷಕರು ಮೋಕಾ ಇವರ ವರದಿಸಲ್ಲಿಸಿರುವುದರಿಂದ ಈ ಕೆಳಗಿನಂತೆ ಆದೇಶ

**-::ಆದೇಶ::-**

**ಸಂ/ಕಂ/ವಿವಾದ/61/2015-16** **ದಿನಾಂಕ:18/7/2016**

ಪ್ರಸ್ತಾವನೆಯಲ್ಲಿ ವಿವರಿಸಿದಂತೆ ಬಳ್ಳಾರಿ ತಾಲೂಕು ಮೋಕಾ ಹೋಬಳಿಯ ಬೆಣಕಲ್ಲು ಗ್ರಾಮದ ಸರ್ವೆ ನಂ:13/ಬಿ ವಿಸ್ತೀರ್ಣ:3.93 ಎಕರೆ ಜಮಿನಿನ ಪಹಣಿ ಕಾಲಂ 11 ರಲ್ಲಿ ಹೆಚ್ ರಾಮಪ್ಪನಿಗೆ ವಿಕ್ರಯವಾಗಿದೆ ಕಬ್ಜ ಬಿಟ್ಟಿಲ್ಲ ಎನ್ನುವುದನ್ನು ತೆಗೆದುಹಾಕಲು ಆದೇಶಿಸಲಾಗಿದೆ.

ಈ ಆದೇಶವು ಇಂದು ದಿನಾಂಕ:18.7.2016ರಂದು ನ್ಯಾಯಾಲಯದಲ್ಲಿ ಘೋಷಿಸಲಾಯಿತು.

ತಹಶೀಲ್ದಾರರು
ತಹಶೀಲ್ದಾರರು, ಬಳ್ಳಾರಿ
ಬಳ್ಳಾರಿ
Tasildar, Bellary

ಪ್ರತಿಯನ್ನು:
1.ವಾದಿಗಳು
2.ಶಿರಸ್ತೇದಾರರು ಭೂಮಿ ಗಣಿಕೀಕರಣ ಕೇಂದ್ರ ಶಾಖೆಗೆ ಸೂಕ್ತ ಕ್ರಮಕ್ಕಾಗಿ.
3.ಆದೇಶದ ಕಡತಕ್ಕೆ